# Kuvempu University Library

Jnana Sahyadri, Shankaraghatta

## News Paper Clipping Service from Digital Library

**Date: 10-06-2016**

| Sl. No. | Name of the Paper | No. of Clippings |
|---|---|---|
| 01 | Prajavani | 02 |
| 02 | Vijaya Karnataka | 01 |
| 03 | Indian Express | 01 |

# ವೇತನ ಪರಿಷ್ಕರಣೆಗೆ ಯುಜಿಸಿ ಸಮಿತಿ

ನವದೆಹಲಿ: ವಿಶ್ವವಿದ್ಯಾಲಯ ಮತ್ತು ವಿವಿ ವ್ಯಾಪ್ತಿಯ ಕಾಲೇಜುಗಳ ಬೋಧಕರ ವೇತನ ಪರಿಷ್ಕರಣೆಗೆ ವಿಶ್ವವಿದ್ಯಾಲಯ ಅನುದಾನ ಆಯೋಗ ಸಮಿತಿಯೊಂದನ್ನು ರಚಿಸಿದೆ.

ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ ನಿರ್ದೇಶನದಂತೆ ಸಮಿತಿ ರಚಿಸಲಾಗಿದೆ. ಸರ್ಕಾರ ಮತ್ತು ಯುಜಿಸಿಯ ಹಿಂದಿನ ತೀರ್ಮಾನದ ಜಾರಿ ಬಗ್ಗೆ ಪರಾಮರ್ಶೆ ನಡೆಸಲಿದೆ.

ಯುಜಿಸಿ ಮಾಜಿ ಮುಖ್ಯಸ್ಥ ವಿ.ಎಸ್. ಚೌಹಾಣ್ ವೇತನ ಪರಿಷ್ಕರಣೆ ಸಮಿತಿಯ ಮುಖ್ಯಸ್ಥರಾಗಿದ್ದಾರೆ.

### ಎಲ್‌ಟಿಸಿ ಪ್ರಕರಣ: ಸಿಂಡಿಕೇಟ್ ಸದಸ್ಯರ ಅಧ್ಯಕ್ಷತೆಯಲ್ಲಿ ಸಮಿತಿ ರಚನೆ

# ಪ್ರೊ.ಗಂಗಾಧರಪ್ಪ ವಿರುದ್ಧ ವಿಚಾರಣೆ

● ಇ.ಎಸ್.ಸುಧೀಂದ್ರ ಪ್ರಸಾದ್

**ಧಾರವಾಡ:** ಕರ್ನಾಟಕ ವಿಶ್ವವಿದ್ಯಾಲಯದ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಪ್ರೊ. ಎಂ.ಗಂಗಾಧರಪ್ಪ ಪ್ರವಾಸ ಕೈಗೊಳ್ಳದಿದ್ದರೂ ಎಲ್‌ಟಿಸಿ ಸೌಲಭ್ಯ ಪಡೆದ ಪ್ರಕರಣದ ವಿಚಾರಣೆಗೆ ಕರ್ನಾಟಕ ವಿಶ್ವವಿದ್ಯಾಲಯವು ಸಿಂಡಿಕೇಟ್ ಸದಸ್ಯ ರಮಾನಂದ ನಾಯ್ಕ ಅವರ ನೇತೃತ್ವದಲ್ಲಿ ವಿಚಾರಣಾ ಸಮಿತಿ ರಚಿಸಿದ್ದು, ಇದೇ 11ರಿಂದ (ಶನಿವಾರ) ವಿಚಾರಣೆ ಆರಂಭವಾಗಲಿದೆ.

ಕಾನೂನು ನಿಕಾಯದ ಡೀನ್ ಡಾ.ಸಿ.ರಾಜಶೇಖರ, ಕುಲಸಚಿವರು ಹಾಗೂ ಹಣಕಾಸು ಅಧಿಕಾರಿ ಸಮಿತಿಯ ಇತರ ಸದಸ್ಯರಾಗಿದ್ದಾರೆ. ಉಪಕುಲಸಚಿವರನ್ನು ಸಮಾವೇಶಕರನ್ನಾಗಿ ನೇಮಕ ಮಾಡಿ ಕುಲಸಚಿವರು ಆದೇಶ ಹೊರಡಿಸಿದ್ದಾರೆ.

ಈ ಸಂಬಂಧ ಇದೇ 1ರಂದು ನಡೆದ ವಿ.ವಿ. ಆಡಳಿತ ಮಂಡಳಿ ಸಭೆಯಲ್ಲಿ ಸಮಿತಿ ರಚಿಸಲಾಯಿತು. ಜೂನ್ 11ರಂದು ಬೆಳಿಗ್ಗೆ 11.30ಕ್ಕೆ ಸಿಂಡಿಕೇಟ್ ಸಭಾಂಗಣದಲ್ಲಿ ವಿಚಾರಣೆ ನಡೆಸಲು ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಯಿತು. ವಿಚಾರಣೆಗೆ ಅಗತ್ಯ ದಾಖಲೆಗಳೊಂದಿಗೆ ಖುದ್ದು ಹಾಜರಾಗಿ ಹೇಳಿಕೆ ದಾಖಲಿಸುವಂತೆ ಪ್ರೊ. ಗಂಗಾಧರಪ್ಪ ಅವರಿಗೆ ಕ.ವಿ.ವಿ ಸೂಚಿಸಿದೆ' ಎಂದು ಮೂಲಗಳು ಖಚಿತಪಡಿಸಿವೆ.

**ಮುಖ್ಯಾಂಶಗಳು**

- ಅಸ್ಸಾಂನ ದಿಬ್ರುಗಡಕ್ಕೆ ಪ್ರಯಾಣದ ದಾಖಲೆ
- ₹ 49,480 ಹಣ ಪಡೆದು, ಮರಳಿಸಿದ್ದ ಮುಖ್ಯಸ್ಥರು
- ಪ್ರವಾಸ ಕೈಗೊಳ್ಳದಿದ್ದಕ್ಕೆ ವಿವರಣೆ ಕೇಳಿದ್ದ ವಿ.ವಿ

**ಘಟನೆ ಹಿನ್ನೆಲೆ:** 2015ರ ಜೂನ್ 1ರಿಂದ 15ರವರೆಗೆ ಅಸ್ಸಾಂ ರಾಜ್ಯದ ದಿಬ್ರುಗಡಕ್ಕೆ ಕುಟುಂಬ ಸಮೇತರಾಗಿ ಹೋಗಲು ಎಲ್‌ಟಿಸಿ ಅಡಿಯಲ್ಲಿ ರಜೆ ಮಂಜೂರು ಮಾಡಬೇಕು ಎಂದು ಮೇ 30ರಂದು ಪ್ರೊ. ಗಂಗಾಧರಪ್ಪ ಅರ್ಜಿ ಸಲ್ಲಿಸಿದ್ದರು. ಅದನ್ನು ಪರಿಗಣಿಸಿದ್ದ ಕ.ವಿ.ವಿ ರಜೆ ಮಂಜೂರು ಮಾಡಿತ್ತು. ಜೂನ್ 17ರಂದು ತಾವು ಪ್ರಯಾಣ ಮಾಡಿದ ದಾಖಲೆ ಸಮೇತ ವಿ.ವಿಗೆ ವಿವರ ನೀಡಿ ₹ 49,480 ನೀಡುವಂತೆ ಕೋರಿದ್ದರು.

ಇವರು ನೀಡಿದ ವಿವರಗಳನ್ನು ಆಧರಿಸಿ ವಿ.ವಿ ಅವರ ಖಾತೆಗೆ ಹಣವನ್ನೂ ವರ್ಗಾಯಿಸಿತ್ತು. ಆದರೆ ವಾಸ್ತವದಲ್ಲಿ ಪ್ರವಾಸ ಮಾಡಿದ್ದೇವೆ ಎಂದು ಹೇಳಿದ್ದ ದಿನಗಳಲ್ಲಿ ಅವರು ಧಾರವಾಡದಲ್ಲಿ ತಮ್ಮ ಮಗಳ ಮದುವೆ ಕಾರ್ಯದಲ್ಲಿ ನಿರತರಾಗಿದ್ದರು. ಈ ಕುರಿತು 'ಪ್ರಜಾವಾಣಿ'ಯು ಕಳೆದ ಅಕ್ಟೋಬರ್ 22ರಂದು ವರದಿ ಪ್ರಕಟಿಸಿತ್ತು. ಈ ವರದಿಯನ್ನು ಆಧರಿಸಿ ಕುಲಸಚಿವರು, ಡಾ. ಗಂಗಾಧರಪ್ಪ ಅವರಿಗೆ ಕಾರಣ ಕೇಳಿ ನೋಟಿಸ್ ಜಾರಿ ಮಾಡಿದ್ದರು.

ಇದಕ್ಕೆ ಉತ್ತರಿಸಿದ್ದ ಗಂಗಾಧರಪ್ಪ, 'ಅನಿವಾರ್ಯ ಕಾರಣಗಳಿಂದ ಎಲ್‌ಟಿಸಿ ಸೌಲಭ್ಯದಡಿ ಪ್ರವಾಸ ಮಾಡಲು ಸಾಧ್ಯವಾಗಿಲ್ಲ. ಈ ಸಂಬಂಧ ₹ 49,480 ಮೊತ್ತವನ್ನು ಚಲನ್ ಮೂಲಕ ವಿ.ವಿಗೆ ಭರಿಸಿದ್ದೇನೆ. ಮುಂದೆ ಎಲ್‌ಟಿಸಿ ಹೋಗುವ ದಿನಾಂಕವನ್ನು ತಿಳಿಸುತ್ತೇನೆ. ಜತೆಗೆ ಮತ್ತೊಮ್ಮೆ ಮೊದಲನೇ ಬಾರಿಗೆ ಪ್ರವಾಸದ ಸೌಲಭ್ಯವನ್ನು ನೀಡಿ, ಕುಟುಂಬ ಸಮೇತರಾಗಿ ಅಸ್ಸಾಂನ ದಿಬ್ರುಗಡಕ್ಕೆ ಹೋಗಿ ಬರಲು ಅನುಮತಿ ನೀಡಬೇಕು' ಎಂದು ವಿನಂತಿಸಿಕೊಂಡಿದ್ದರು.

ಆದರೆ ಹಣಕಾಸು ಇಲಾಖೆಯಾಗಲೀ ಅಥವಾ ವಿಶ್ವವಿದ್ಯಾಲಯವಾಗಲೀ ಅವರಿಗೆ ಹಣವನ್ನು ತುಂಬಿ ಎಂದು ಸೂಚಿಸಿರಲಿಲ್ಲ. ಆದರೆ ತಾವೇ ಖುದ್ದಾಗಿ ಹಣವನ್ನು ಚಲನ್ ಮೂಲಕ ತುಂಬಿರುವುದನ್ನೇ ಪ್ರಶ್ನಿಸಿ ಗಂಗಾಧರಪ್ಪ ಅವರಿಗೆ ಕುಲಸಚಿವರು ಮತ್ತೊಂದು ನೋಟಿಸ್ ಜಾರಿ ಮಾಡಿದ್ದರು. ಅದರಲ್ಲಿ, 'ಮೊದಲ ಬಾರಿಗೆ ಪ್ರಯಾಣ ಮಾಡಿ ಪ್ರವಾಸದ ರಸೀತಿಯನ್ನು ನೀಡಿ ಹಣವನ್ನೂ ಪಡೆದಿದ್ದೀರಿ. ಸಾಲದಕ್ಕೆ ಹಣವನ್ನು ವಿ.ವಿಗೆ ಹಿಂತಿರುಗಿಸಿ ಈಗ ಮತ್ತೊಮ್ಮೆ ಮೊದಲನೇ ಬಾರಿಗೆ ಎಲ್‌ಟಿಸಿ ಸೌಲಭ್ಯ ನೀಡಿ ಎಂದು ವಿನಂತಿಸಿರುವುದನ್ನು ಪರಿಗಣಿಸಲು ರಾಜ್ಯ ಸರ್ಕಾರದ ಸೇವಾ ನಿಯಮಗಳಲ್ಲಿ ಅವಕಾಶವಿಲ್ಲ. ಹೀಗಾಗಿ ಈಗಾಗಲೇ ಹೋಗಿ ಬಂದಿರುವುದಾಗಿ ವಿ.ವಿಗೆ ತಿಳಿಸಿ ಹಣ ಪಡೆದಿರುವುದು ಲೆಕ್ಕ ಪರಿಶೋಧನೆಗೆ ಒಳಪಡುವುದರಿಂದ ಏಳು ದಿನದೊಳಗಾಗಿ ಲಿಖಿತ ವಿವರಣೆ ನೀಡಿ' ಎಂದು ತಿಳಿಸಿದ್ದರು.

ಇದಕ್ಕೆ ಪ್ರೊ. ಗಂಗಾಧರಪ್ಪ ಅವರಿಂದ ಯಾವುದೇ ಉತ್ತರ ಬಾರದ ಕಾರಣ ಜೂನ್ 1ರಂದು ಸಭೆ ನಡೆಸಿದ ವಿ.ವಿ ಆಡಳಿತ ಮಂಡಳಿ, ರಮಾನಂದ ನಾಯ್ಕ ಅವರ ಅಧ್ಯಕ್ಷತೆಯಲ್ಲಿ ವಿಚಾರಣಾ ಸಮಿತಿಯನ್ನು ರಚಿಸಿದ್ದು, ಶನಿವಾರದಿಂದ ವಿಚಾರಣೆ ಆರಂಭವಾಗಲಿದೆ.

Vijaya Karnataka, Page – III ( Supp Page )



ಕುವೆಂಪು ವಿ.ವಿ ಪರಿಸರ ವಿಜ್ಞಾನ ವಿಭಾಗ, ಎಸ್‌ಬಿಎಂ ಜ್ಞಾನಸಹ್ಯಾದ್ರಿ ಆಶ್ರಯದಲ್ಲಿ ಬುಧವಾರ ವಿವಿ ಆವರಣದಲ್ಲಿ ವಿಶ್ವಪರಿಸರ ದಿನಾಚರಣೆ ಕಾರ್ಯಕ್ರಮಕ್ಕೆ ಕುಲಪತಿ ಪ್ರೊ.ಜೋಗನ್ ಶಂಕರ್ ಹಾಗೂ ಕುಲಸಚಿವ ಪ್ರೊ.ಜಿ.ಸೋಮಶೇಖರ್ ಸಸಿ ನೆಡುವ ಮೂಲಕ ಚಾಲನೆ ನೀಡಿದರು. ಎಸ್‌ಬಿಎಂ ಮ್ಯಾನೇಜರ್ ಬಿನಯ್‌ಕುಮಾರ್ ಭಾಗವಹಿಸಿದ್ದರು.

# Splinter varsities can start only in 2017: officials

EXPRESS NEWS SERVICE
@ Bengaluru

THOUGH Higher Education Minister T B Jayachandra says that the two new universities carved out of Bangalore University will start functioning from the current academic year, officials in the Department of Higher Education say it will be possible only by 2017-18.

According to officials, this year the universities can only start preparations to start functioning from next year. "To start functioning, each university will need at least ₹200 crore from the government," said an official.

"Building a new university is not a small thing. They need to recruit teaching and non teaching staff, construct buildings, create infrastructure etc. As of now the government has frozen recruitment at Bangalore University and that has to be removed first," said a former vice chancellor of a state university.

As Bangalore University has issued an admission notification for the present academic year, examination and other academic activities of the students of this batch will be conducted by the university. "We cannot transfer students now. But if the government directs us to transfer, we will do it. But agains we will have to conduct examination and evaluation for them as the new universities do not have such facilities as of now," said a BU official.

Though the exercise of splitting Bangalore University started back in 2009, it came to an end with the appointment of special officers for two new universities on Monday. "The government has appointed Prof T D Kemparaju, registrar of Mangalore University, as special officer for Bangalore North University and Prof Japhet from National Law School India University, Bengaluru for Bangalore Central University," said T B Jayachandra.

The file relating to the appointment of special officers was pending before the Chief Minister almost since six months. There were hundreds of applications and recommendations and the decision was finally taken on Monday.

**TAKING COUNT**

| District | No. of colleges |
|---|---|
| Bengaluru Urban | 474 |
| Bengaluru Rural | 28 |
| Chikkaballapur | 33 |
| Kolar | 43 |
| Ramanagaram | 28 |

### Cutting down size

The present Bangalore university is spread over five districts - Bengaluru urban, Bengaluru Rural, Chikkaballapura, Ramanagaram and Kolar. It has affiliated 606 colleges with 3.5 lakh students. The demand to divide the university was first made in 2009 with the intention of improving efficiency. However, after several attempts, the decision to trifurcate BU was taken last year.